ಶಾಲಾ ಮೂಲಕ ಪ್ರಜಾಪ್ರಭುತ್ವದ ಕಲಿಕೆ

ಅಭಿಲಾಷಾ ಅವಸ್ಥಿ

2019ರ ಚಳಿಗಾಲದಲ್ಲಿ, ಶಾಲೆಗಳಲ್ಲಿ ಪ್ರಜಾಪ್ರಭುತ್ವವು ಹೇಗೆ ಕೆಲಸ ಮಾಡುತ್ತದೆ ಹಾಗು ಪ್ರಜಾಸತ್ತೆಗೆ ಸಂಬಂಧಿಸಿದ ಪರಿಕಲ್ಪನೆಗಳನ್ನು ಬೋಧಿಸುವ ಪರಿಣಾಮಗಳನ್ನು ತಿಳಿದುಕೊಳ್ಳುವ ಉದ್ದೇಶದಿಂದ ದಿನೇಶಪುರದ ಅಜೀಂ ಪ್ರೇಮ್‌ಜಿ ಶಾಲೆಯಲ್ಲಿ ನಾನು ಸೀಮಿತವಾದ ಒಂದು ಸಂಶೋಧನಾ ಅಧ್ಯಯನವನ್ನು ನಡೆಸಿದೆ. ನಾನು ಆರು, ಏಳು ಮತ್ತು ಎಂಟನೇ ತರಗತಿಯಲ್ಲಿ ಕೆಲಸ ಮಾಡಿದರೂ ಏಳನೇ ತರಗತಿಯೇ ನನ್ನ ಅಧ್ಯಯನದ ಕೇಂದ್ರಬಿಂದುವಾಗಿತ್ತು. 2005ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಅನ್ವಯ ಪರಿಷ್ಕೃತಗೊಂಡ ಎನ್‌ಸಿಇಆರ್‌ಟಿ (NCERT) ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ಕೊಟ್ಟಿರುವಂತೆ ಪ್ರಜಾಸತ್ತೆಯ ಕೆಲವು ಮೂಲ ಪರಿಕಲ್ಪನೆಗಳನ್ನು ನಾನು ಅವರಿಗೆ ಬೋಧಿಸಿದೆ.

ಪ್ರಜಾಪ್ರಭುತ್ವದ ಇರುವಿಕೆ

ಶಾಲಾ ಪಠ್ಯಕ್ರಮ

ಮಗುವಿನ ಕಲಿಕೆಯನ್ನು ರೂಪಿಸುವಲ್ಲಿ ಅನೇಕ ಸಂಗತಿಗಳ ಪಾತ್ರವಿರುತ್ತದೆ. ಅವುಗಳಲ್ಲಿ ಮುಖ್ಯವಾದುದು ಶಾಲಾ ಪಠ್ಯಕ್ರಮ. ಪಠ್ಯಕ್ರಮದ ಮೇಲೆ ಇತರ ಹಲವು ಸಂಗತಿಗಳು ಪರಿಣಾಮ ಬೀರುತ್ತದೆಯಾದರೂ, ಶಾಲಾ ಸಂದರ್ಭದಲ್ಲಿ ಒಳಗೊಳ್ಳುವ ಗೌಪ್ಯ ಪಠ್ಯಕ್ರಮವೇ ಗಮನಾರ್ಹ ಅಂಶವಾಗಿರುತ್ತದೆ.

ದಿನೇಶಪುರದ ಅಜೀಂ ಪ್ರೇಮ್‌ಜಿ ಶಾಲೆಯ ಸಂದರ್ಭದಲ್ಲಿ ನಾನು ಗಮನಿಸಿದಂತೆ, ಭಾರತದ ಪ್ರಜಾಪ್ರಭುತ್ವದಲ್ಲಿ ಮೂಲಭೂತ ತತ್ವವೆಂದು ವರ್ಣಿಸಲಾಗಿರುವ ಸಮಾನತೆಯನ್ನು ಅರಿತು–ಕೊಳ್ಳಲಾಗಿತ್ತು. ಬಹುತೇಕ ಮಕ್ಕಳ ಜೊತೆಗೆ ಕತೆಗಳ ಬಗ್ಗೆ ಚರ್ಚಿಸಿದಾಗ ಮತ್ತು ಚಟುವಟಿಕೆಗಳಲ್ಲಿ ಗಮನಿಸಿದಂತೆ ಅವರು ಭಾರತದ ಪ್ರಜಾಪ್ರಭುತ್ವಕ್ಕೆ ವಿರುದ್ಧವಾದ ಅಂಶಗಳನ್ನು ಅರ್ಥೈಸಿಕೊಳ್ಳಲು ಶಕ್ತರಾಗಿದ್ದುದನ್ನು ಗಮನಿಸಿದೆ. ಸಂವಿಧಾನಕ್ಕೆ ವಿರುದ್ಧವಾದುದನ್ನು ಅರ್ಥ ಮಾಡಿಕೊಳ್ಳುವ ಮತ್ತು ಗುರುತಿಸುವ ಆಂತರಿಕ ಸಾಮರ್ಥ್ಯವನ್ನು ಹಾಗು ಯಾವ ಸಂದರ್ಭಗಳಲ್ಲಿ ಹಾಗೆ ಆಗುತ್ತವೆ ಎನ್ನುವುದನ್ನು ನಾನು ವಿದ್ಯಾರ್ಥಿಗಳಲ್ಲಿ ಸ್ಪಷ್ಟವಾಗಿ ಗಮನಿಸಬಹುದಾಗಿತ್ತು.

ಶೈಕ್ಷಣಿಕವಾಗಿ (ಆ ಶಾಲೆಯು ಎನ್‌ಸಿಇಆರ್‌ಟಿ ಪಠ್ಯವನ್ನು ಅಳವಡಿಸಿಕೊಂಡಿದೆ), ಮೂರೂ ತರಗತಿಗಳಲ್ಲಿ 'ಸಮಾನತೆ'ಯನ್ನು ಬೋಧಿಸಲಾಗುತ್ತಿತ್ತು. ಏಳನೇ ತರಗತಿಯಲ್ಲಿ, ನಾನು ಲಿಂಗ ಸಮಾನತೆಯನ್ನು ಬೋಧಿಸುತ್ತಿದ್ದಾಗ, ಅವರಲ್ಲಿನ ಸಮಾನತೆಯ ಕಲ್ಪನೆಯೂ ಬೆಳಕಿಗೆ ಬಂದಿತು. ಹುಡುಗರು ತಮ್ಮಂತೆಯೇ ಯಾಕೆ ಕೆಲಸ ಮಾಡಿಸಲಾಗುವುದಿಲ್ಲ ಎಂದು ಹುಡುಗಿಯರು ಪ್ರಶ್ನಿಸಿದರು. ಕೆಲವು ಹುಡುಗರು ತಾವು ಮನೆಯ ಎಲ್ಲಾ ಕೆಲಸಗಳಲ್ಲಿ ಸಮಾನವಾಗಿ ತೊಡಗಿಸಿಕೊಳ್ಳುತ್ತೇವೆ ಎಂದು ಹೇಳಿದರು.

ನಾನು ಏಳನೇ ತರಗತಿಯ ವಿದ್ಯಾರ್ಥಿಗಳಿಗೆ ಲಿಂಗ ಸಮಾನತೆಯ ಕುರಿತಾದ ಕಿರುಚಿತ್ರ 'ದಿ ಇಂಪಾಸಿಬಲ್ ಡ್ರೀಮ್'ಅನ್ನು (The Impossible Dream) ತೋರಿಸಿದೆ. ಹಾಸ್ಯ ಮತ್ತು ಅದ್ಭುತವಾದ ದೃಶ್ಯಗಳ ಮೂಲಕ ಈ ಕಿರುಚಿತ್ರದಲ್ಲಿ, ಮನೆಗೆಲಸ ಮತ್ತು ಮಕ್ಕಳ ಪೋಷಣೆಯಲ್ಲಿ ಗಂಡಸರೂ ಸಹ ಜವಾಬ್ದಾರಿಯನ್ನು ಹಂಚಿ–ಕೊಳ್ಳಬೇಕಾದ ಅವಶ್ಯಕತೆಯನ್ನು ತೋರಿಸಿಕೊಡಲಾಗಿದೆ. ವಿದ್ಯಾರ್ಥಿಗಳು ಅದರಲ್ಲಿನ ನ್ಯೂನತೆಗಳನ್ನು ತಕ್ಷಣವೇ ಗುರುತಿಸಿದರು ಮತ್ತು ಅವೆಲ್ಲವನ್ನು ತಮ್ಮ ಬದುಕಿಗೆ ಅನ್ವಯಿಸಿಕೊಂಡರು. ತಾವು ಮತ್ತು ಇತರರು ಲಿಂಗದ ಕಾರಣಕ್ಕಾಗಿ ಎದುರಿಸುತ್ತಿರುವ ತಾರತಮ್ಯಗಳ ಬಗ್ಗೆ ಅವರು ಉದಾಹರಣೆ–ಯೊಂದಿಗೆ ಹೇಳಿಕೊಂಡರು. ಆಗ ನಾವು, ಸಮಾನತೆ ಬಗ್ಗೆ ಸಂವಿಧಾನದಲ್ಲಿ ಏನು ಹೇಳಿದೆ ಎಂದು ತಿಳಿಸಲಾರಂಭಿಸಿದೆವು. ಆದರೆ ಅಚ್ಚರಿ ಎಂಬಂತೆ ಏಳನೇ ತರಗತಿಯ ವಿದ್ಯಾರ್ಥಿಗಳು ಈ ಪರಿಕಲ್ಪನೆಯನ್ನು ತುಂಬಾ ಆಂತರಿಕವಾಗಿ ಗ್ರಹಿಸುವಂತೆ ಕಂಡುಬಂದರು. ತಮ್ಮ ಮನೆಗಳಲ್ಲಿ ಕಾಣುವ ಅಸಮಾನತೆಯ ಬಗ್ಗೆ, ವಿಶೇಷವಾಗಿ ಹೆಣ್ಣುಮಕ್ಕಳಿಗಿದ್ದ ಅಸಮಾನತೆಯ ಬಗ್ಗೆ ಅಂದರೆ, ಅವರು ಶಾಲಾ ಸಮಯದ ಬಳಿಕ ಮನೆಗೆಲಸಗಳನ್ನು ಮಾಡಬೇಕಾದ ಅನಿವಾರ್ಯತೆ ಮತ್ತು ಗಂಡು ಮಕ್ಕಳಿಗೆ ಅದರಿಂದ ವಿನಾಯಿತಿ ಇದ್ದುದರ ಬಗ್ಗೆ ಅವರು ಮುಕ್ತವಾಗಿ ಮಾತನಾಡಿದರು.

'ನೀವು ಈ ಶಾಲೆ ಮತ್ತು ತರಗತಿಯಲ್ಲಿ ಸಮಾನರಾಗಿದ್ದೀರಿ ಅಂದುಕೊಂಡಿದ್ದೀರಾ?' ಎಂದು ನಾನು ಕೇಳಿದಾಗ ಅವರ ಉತ್ತರದಲ್ಲಿ ಹೌದೆಂಬ ಖಚಿತತೆ ಇತ್ತು. 'ಹಾಗೆ ಯಾಕೆ ಹೇಳುತ್ತೀರಿ' ಎಂದು ಕೇಳಿದ್ದಕ್ಕೆ, 'ಶಾಲೆಯಲ್ಲಿ ನಮ್ಮನ್ನು ಸಮಾನವಾಗಿ ಕಾಣಲಾಗುತ್ತದೆ' ಎಂದು ಉತ್ತರಿಸಿದರು. ಶಾಲಾ ಪ್ರಾಂಶುಪಾಲರು ತಮ್ಮೆಲ್ಲರನ್ನೂ ಸಮಾನವಾಗಿ ಕಾಣುತ್ತಾರೆ. ಅಲ್ಲದೆ ತಾರತಮ್ಯ ಕಂಡುಬಂದಲ್ಲಿ ಅದನ್ನು ವಿರೋಧಿಸುತ್ತಾರೆ ಎಂದು ಉದಾಹರಣೆಯನ್ನೂ ಕೊಟ್ಟರು.

ಏಳನೇ ತರಗತಿಯ 'ಗ್ರೋಯಿಂಗ್ ಅಪ್ ಆಸ್ ಬಾಯ್ಸ್ ಅಂಡ್ ಗರ್ಲ್ಸ್' (Growing up as Boys and Girls) ಎಂಬ ಪಠ್ಯ–ಪುಸ್ತಕದಿಂದ 'ಮೈ ಮದರ್ ಡಸನ್ಟ್ ವರ್ಕ್' (My Mother Doesn't Work) ಎಂಬ ಪಾಠವನ್ನು ಓದಿ, ಮನೆಕೆಲಸಗಳಲ್ಲಿ ನೆರವಾಗುವ ವಿಚಾರವನ್ನು ಗಂಭೀರವಾಗಿ ಚರ್ಚಿಸಿದೆವು. ಹುಡುಗರು ಯಾಕೆ ಮನೆಯ ಕೆಲಸಗಳಲ್ಲಿ ನೆರವಾಗುವುದಿಲ್ಲ ಎಂಬುದಕ್ಕೆ ಕಾರಣ ಕಂಡುಕೊಳ್ಳುವ ಹಂತದಲ್ಲಿ, ತಮ್ಮ ಮನೆಗಳಲ್ಲಿ ಯಾವುದೇ ಕೆಲಸಗಳಿಗೆ ನೆರವಾಗುವಂತೆ ತಮಗೆ ಪೋಷಕರು ಹೇಳುವುದಿಲ್ಲ. ಯಾಕೆಂದರೆ, ಮನೆಯ ಕೆಲಸ ಮಾಡುವುದು ಹುಡುಗರ ಜವಾಬ್ದಾರಿ ಅಲ್ಲ ಎಂದು ತಮ್ಮ ಪೋಷಕರಲ್ಲಿ ಹಳೆಯ ಕಾಲದ ನಂಬಿಕೆ ಬೇರೂರಿದೆ' ಎಂದು ಹುಡುಗರು ತಿಳಿಸಿದರು. 'ನಾನು ಪ್ರತಿದಿನ ಪೂಜೆ ಮಾಡಲೇ ಎಂದು ನನ್ನ ಅಜ್ಜಿಯನ್ನು ಒಮ್ಮೆ ಕೇಳಿದೆ. ಅದಕ್ಕೆ ಅವರು, 'ಅದು ಹುಡುಗರ ಕೆಲಸವಲ್ಲ' ಎಂದು ಹೇಳಿದರು – ಎಂದು ಒಬ್ಬ ಬಾಲಕ ವಿವರಿಸಿದ. ಗಂಡು ಮಕ್ಕಳು

ಮತ್ತು ಹೆಣ್ಣುಮಕ್ಕಳಿಗೆ ಕೆಲಸ ಹಂಚಿಕೆ ಮಾಡುವ ವಿಚಾರವಾಗಿ ಮನೆಯವರಲ್ಲಿ ಬೇರೂರಿರುವ ಜಿಗುಟುತನವನ್ನು, ಒಬ್ಬರು ಇನ್ನೊಬ್ಬರ ಕೆಲಸವನ್ನು ಹಂಚಿಕೊಂಡು ಮಾಡುವುದಕ್ಕೂ ನಮನೀಯತೆ ಇಲ್ಲದಿರುವುದನ್ನೂ ಇದು ತೋರಿಸಿಕೊಡುತ್ತದೆ. ಶಾಲೆಯಿಂದ ಮನೆಗೆ ಹೋದಾಗ ಎಷ್ಟೇ ದಣಿವಾಗಿದ್ದರೂ ಮನೆಕೆಲಸಗಳನ್ನು ಅನಿವಾರ್ಯವಾಗಿ ಮಾಡಲೇಬೇಕು ಎಂದು ಮನೆ ಮಂದಿಯ ನಿರೀಕ್ಷೆಯಾಗಿರುತ್ತದೆ ಎಂದು ಹುಡುಗಿಯೊಬ್ಬಳು ಹೇಳಿದಳು. ಇದೇ ವಿಚಾರವನ್ನು ಏಳನೇ ತರಗತಿಯ ಅನೇಕ ಗುಂಪುಗಳೊಡನೆ ಚರ್ಚಿಸಿದಾಗ ಹಲವು ರೀತಿಯ ವಾದಗಳು ನಡೆದು, ಹಳೆಯ ತಲೆಮಾರಿನವರ ಸಂಕುಚಿತ ಮನೋಭಾವದ ಬಗ್ಗೆ ಪರ ಮತ್ತು ವಿರೋಧದ ಅಭಿಪ್ರಾಯಗಳು ವ್ಯಕ್ತವಾದವು. ಆರರಿಂದ ಏಳನೇ ತರಗತಿಯವರೆಗಿನ ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ಸಮಾನತೆಯ ಪರಿಕಲ್ಪನೆಯ ಬಗ್ಗೆ ಅರಿವು ಇತ್ತು. ತಮ್ಮ ಬಗ್ಗೆ ಪಕ್ಷಪಾತ ಮಾಡಬಾರದು, ಒಂದು ವೇಳೆ ಆದದ್ದರೂ, ಆ ವಿಚಾರದಲ್ಲಿ ನೆರವು ಪಡೆಯಬೇಕು ಎಂಬ ತಿಳುವಳಿಕೆ ಅವರಲ್ಲಿತ್ತು. ಆದ್ದರಿಂದ, ಈ ಪರಿಕಲ್ಪನೆಯ ಬಗ್ಗೆ ಈ ಹಂತದ ವಿದ್ಯಾರ್ಥಿಗಳು ತಕ್ಷಣ ಸ್ಪಂದಿಸಿದ ರೀತಿಯ ಜೊತೆಗೆ ಸಮಾನತೆಯ ದೃಷ್ಟಿಕೋನವನ್ನು ಎತ್ತಿಹಿಡಿದುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಲಾಯಿತು. ಪಠ್ಯಪುಸ್ತಕದಲ್ಲಿ ಯಾವುದೋ ಅಪರಿಚಿತ ಪರಿಕಲ್ಪನೆಯನ್ನು ನೀಡಲಾಗಿದೆ ಎಂದು ಯಾರೂ ಭಾವಿಸದೆ ಹೆಚ್ಚು ವಾಸ್ತವಿಕವಾದ ಹಾಗು ಸಂಬಂಧಪಟ್ಟ ವಿಚಾರಗಳನ್ನೇ ಚರ್ಚಿಸಿದರು. ಶಾಲೆಯಲ್ಲಿ ಕಾಳಜಿಪೂರ್ವಕವಾಗಿ ನಿರ್ಮಿಸಲಾಗಿರುವ ಪಕ್ಷಪಾತ ವಿರೋಧಿ ವಾತಾವರಣದ ನೆರವಿನೊಂದಿಗೆ, ಎನ್‌ಸಿಇಆರ್‌ಟಿ ಪಠ್ಯ-ಪುಸ್ತಕದಲ್ಲಿನ ಅಧ್ಯಾಯಗಳನ್ನು ಕೈಗೆತ್ತಿಕೊಂಡಾಗ ಅವರು ಅದರೊಂದಿಗೆ ಆಳವಾಗಿ ತಮ್ಮನ್ನು ತೊಡಗಿಸಿಕೊಂಡರು.

ತರಗತಿ ಮತ್ತು ವಿದ್ಯಾರ್ಥಿ ಪ್ರತಿನಿಧಿಗಳು

ಪ್ರತಿ ತರಗತಿಯಲ್ಲೂ ಇಬ್ಬರು ತರಗತಿ ಪ್ರತಿನಿಧಿಗಳು (class representatives) ಇದ್ದರು. ತಲಾ ಒಂದು ಗಂಡು ಮಗು ಹಾಗು ಒಂದು ಹೆಣ್ಣು ಮಗು. ಅವರಿಗೆ ಬೇರೆಬೇರೆ ರೀತಿಯ ಕರ್ತವ್ಯಗಳಿದ್ದವು. ಉದಾಹರಣೆಗೆ, ತರಗತಿಯ ಶುಚಿತ್ವ ಕಾಪಾಡುವುದು, ಇತರ ವಿದ್ಯಾರ್ಥಿಗಳಲ್ಲಿನ ಶಿಸ್ತು, ತರಗತಿಯ ಆಂತರಿಕ ಸಮಸ್ಯೆಗಳನ್ನು ಬಗೆಹರಿಸುವುದು, ಮಹತ್ವದ ವಿಷಯಗಳ ಕುರಿತು ಅಧ್ಯಾಪಕರನ್ನು ಸಂಪರ್ಕಿಸುವುದು ಇತ್ಯಾದಿ. ಜೊತೆಗೆ ಅವರಿಗೆ ಶಾಲೆಯ ಮಟ್ಟದ ಕರ್ತವ್ಯಗಳೂ ಇದ್ದವು. ಉದಾಹರಣೆಗೆ: ಮಧ್ಯಾಹ್ನದ ಬಿಸಿಯೂಟ ಬಡಿಸುವುದು, ಊಟದ ಬಳಿಕ ಪ್ರತಿ ತಟ್ಟೆಯನ್ನೂ ಸ್ವಚ್ಛವಾಗಿ ತೊಳೆದಿಡಲಾಗಿದೆಯೇ ಎಂದು ನೋಡುವುದು, ಶೂಗಳನ್ನು ಸೂಕ್ತ ಸ್ಥಳಗಳಲ್ಲಿ ಇಡಲಾಗಿದೆಯೇ ಎಂದು ನೋಡುವುದು, ತಡವಾಗಿ ಶಾಲೆಗೆ ಬಂದವರ ಹೆಸರುಗಳನ್ನು ಬರೆದಿಡುವುದು ಇತ್ಯಾದಿ.

ಇಷ್ಟಲ್ಲದೆ, ಶಾಲೆಯಲ್ಲಿ ಇನ್ನಿಬ್ಬರು ವಿದ್ಯಾರ್ಥಿಗಳು– ಒಬ್ಬ ಹುಡುಗ ಮತ್ತು ಒಬ್ಬ ಹುಡುಗಿ– ಶಾಲಾ ಪ್ರತಿನಿಧಿಗಳಾಗಿದ್ದರು. ಅಲ್ಲದೆ ಓರ್ವ ನ್ಯಾಯಾಂಗ ಅಧಿಕಾರಿಯೂ ಇದ್ದರು. ಈ ಎಲ್ಲಾ ಪ್ರತಿನಿಧಿಗಳು– ತರಗತಿ ಪ್ರತಿನಿಧಿ, ಶಾಲಾ ಪ್ರತಿನಿಧಿ ಮತ್ತು ನ್ಯಾಯಾಂಗ ಅಧಿಕಾರಿ ಪ್ರತಿ ಬುಧವಾರ ಸಭೆ ಸೇರಿ ತಮ್ಮತಮ್ಮ ಜವಾಬ್ದಾರಿ ಮತ್ತು ಕರ್ತವ್ಯಗಳ ಬಗ್ಗೆ ಚರ್ಚಿಸಿ, ತಮ್ಮತಮ್ಮ ತರಗತಿಯ ವಾತಾವರಣವನ್ನು ಬದಲಾಯಿಸಲು, ಸೌಂದರ್ಯ ಹೆಚ್ಚಿಸಲು ಯೋಜನೆಗಳನ್ನು ರೂಪಿಸುತ್ತಿದ್ದರು. ಅಲ್ಲದೆ, ಶಾಲಾ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ನಡುವೆ ಸಂಪರ್ಕ ಸೇತುವೆಗಳಂತೆ ಕೆಲಸ ನಿರ್ವಹಿಸುತ್ತಿದ್ದರು. ಈ ಚರ್ಚೆಗಳು ಅವರಲ್ಲಿನ ನಾಯಕತ್ವ ಗುಣವನ್ನು ಉದ್ದೀಪನಗೊಳಿಸುವ ನಿಟ್ಟಿನಲ್ಲಿ ಪಾತ್ರ ವಹಿಸಬೇಕು ಎಂಬ ಗುರಿಯನ್ನೂ ಹೊಂದಲಾಗಿತ್ತು. ಇವೆಲ್ಲವನ್ನೂ ತರಗತಿ ಪ್ರತಿನಿಧಿಗಳನ್ನು ವಿದ್ಯಾರ್ಥಿಗಳ ಮೂಲಕ ಚುನಾಯಿಸಿ, ಈ ತರಗತಿ ಪ್ರತಿನಿಧಿಗಳು ಒಟ್ಟಾರೆ ವಿದ್ಯಾರ್ಥಿ ಸಮುದಾಯದ ಏಳಿಗೆಗಾಗಿ ತೀರ್ಮಾನಗಳನ್ನು ಕೈಗೊಳ್ಳುವುದು, ಯಾವುದೇ ಸಂದರ್ಭದಲ್ಲೂ ಏಕಪಕ್ಷೀಯವಾಗಿ (ನಿರಂಕುಶ) ತೀರ್ಮಾನ ಕೈಗೊಳ್ಳದಿರುವುದು, ಇತರ ಪ್ರತಿನಿಧಿಗಳ ನಿಲುವುಗಳನ್ನೂ ಗಣನೆಗೆ ತೆಗೆದುಕೊಳ್ಳುವುದು ಹೀಗೆ ಎಲ್ಲವನ್ನು ಪ್ರಜಾಪ್ರಭುತ್ವದ ನಿಯಮಾವಳಿಯ ಆಧಾರದಲ್ಲಿಯೇ ಮಾಡಲಾಗುತ್ತಿತ್ತು. ಬಹುಮುಖ್ಯವಾಗಿ, ಈ ಪ್ರಕ್ರಿಯೆಗಳು ಅವರಿಗೆ ಸಂಸತ್ತು ಯಾವ ರೀತಿಯಲ್ಲಿ ಕೆಲಸ ಮಾಡಬಹುದು ಎಂಬ ತಿಳುವಳಿಕೆಯನ್ನು ನೀಡುತ್ತಿದ್ದವು. ಸಭೆಗಳಲ್ಲಿ ಪ್ರತಿಯೊಬ್ಬರೂ ಮತ ಚಲಾಯಿಸುತ್ತಿದ್ದರು ಹಾಗು ತಮ್ಮ ದೃಷ್ಟಿಕೋನಗಳನ್ನು ಹಂಚಿಕೊಳ್ಳುತ್ತಿದ್ದರು.

ಹಾಗಿದ್ದರೂ, ಸಂರಚನೆ ಮತ್ತು ತತ್ವಗಳ ನೆಲೆಯಲ್ಲಿ ಇದು ಮಾದರಿಯಾಗಿ ಕಂಡುಬಂದರೂ, ಯಾರೂ ಕ್ರಿಯಾಶೀಲರಾಗಿ ಸಲಹೆ ನೀಡುತ್ತಿರಲಿಲ್ಲ ಎಂಬುದನ್ನು ನಾನು ಬಹಳ ಬೇಗನೆ ಗಮನಿಸಿದೆ. ವಿದ್ಯಾರ್ಥಿಗಳು ತಮ್ಮ ಕೆಲಸಗಳನ್ನು ತಮ್ಮ ಪಾಡಿಗೆ ಯಥಾವತ್ತಾಗಿ ಮಾಡುತ್ತಿದ್ದ ಕಾರಣ ಇಡೀ ಪ್ರಕ್ರಿಯೆ ಯಾಂತ್ರಿಕವಾಗಿ ಸಾಗುತ್ತಿತ್ತೇ ವಿನಾ ತಮ್ಮ ಅಭ್ಯಾಸಗಳನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಕ್ರಿಯಾಶೀಲರಾಗಿ ಪಾಲ್ಗೊಳ್ಳುತ್ತಿರಲಿಲ್ಲ. 'ಪ್ರತಿನಿಧಿ' ಪದದ ಅರ್ಥವೇನು ಎಂದು ಸಮಾಜವಿಜ್ಞಾನ ತರಗತಿಯಲ್ಲಿ ಒಬ್ಬ ತರಗತಿ ಪ್ರತಿನಿಧಿಯ ಬಳಿ ನಾನು ಕೇಳಿದೆ. ವಿದ್ಯಾರ್ಥಿಯೂ ಸೇರಿದಂತೆ ಯಾರೊಬ್ಬರಿಗೂ ಅದಕ್ಕೆ ಉತ್ತರ ಗೊತ್ತಿರಲಿಲ್ಲ. ಅಂದರೆ, ಮಕ್ಕಳು ಇತರರ ಮತಗಳ ಮೂಲಕ ಚುನಾಯಿಸಿ ಬಂದಿರುವ ಕಾರಣ ತಮಗೊಂದು ಅಧಿಕಾರ ಸಿಕ್ಕಿದೆ ಎಂದು ಭಾವಿಸಿದ್ದರೇ ವಿನಾ, ವಿದ್ಯಾರ್ಥಿಗಳೊಂದಿಗೆ ಬೆರೆತು ಕೆಲಸ ಮಾಡಬೇಕು ಎಂಬ ಪರಿಕಲ್ಪನೆಯನ್ನು ಗ್ರಹಿಸಿರಲಿಲ್ಲ. ಈ ವಿದ್ಯಾರ್ಥಿಗಳ ಸಂದರ್ಭದಲ್ಲಿ, ತರಗತಿ ಪ್ರತಿನಿಧಿಯ ಕರ್ತವ್ಯವನ್ನು ಅವರು ಸರಿಯಾಗಿ ಗ್ರಹಿಸಿರಲಿಲ್ಲ. ಪ್ರತಿನಿಧಿಗಳು ತಮ್ಮ ಸಾಮರ್ಥ್ಯವನ್ನು ಅರ್ಥ-ಮಾಡಿಕೊಂಡಿದ್ದರೂ, ಅದನ್ನು ಹೊಣೆಗಾರಿಕೆಯಾಗಿ ಹೇಗೆ ಪರಿವರ್ತಿಸಿಕೊಳ್ಳಬೇಕೆಂದು ಅರಿತಿರಲಿಲ್ಲ. ವಿದ್ಯಾರ್ಥಿಗಳೂ ತಮ್ಮ ಪ್ರತಿನಿಧಿಗಳನ್ನು ಸಹಜವಾಗಿಯೇ ಪ್ರಶ್ನಿಸಬಹುದು ಹಾಗು ತಮ್ಮ ಬೇಡಿಕೆಗಳನ್ನು ಅವರ ಮುಂದಿಡಬಹುದು ಎಂದು ಭಾವಿಸಿಕೊಂಡಿರಲಿಲ್ಲ.

ಶಿಕ್ಷಕರಿಂದ ಮಾದರಿ ನಡವಳಿಕೆಯ ಪ್ರದರ್ಶನ

ಶಾಲಾ ಪ್ರಕ್ರಿಯೆಯಿಂದ ಹೊರಗೆ ನಾನು ಇತರ ಕೆಲವು ಉದಾಹರಣೆಗಳನ್ನು ಗಮನಿಸಿದೆ. ಅವು, ಶಿಕ್ಷಕರು ತೋರಿದ ಪ್ರಜಾಸತ್ತಾತ್ಮಕ ನಡವಳಿಕೆಯ ನಿದರ್ಶನಗಳಾಗಿದ್ದವು. ಒಂದು ನಿದರ್ಶನ ಹೀಗಿತ್ತು: ನಾನು ಕ್ರೀಡಾಂಗಣದಲ್ಲಿ ಕುಳಿತಿದ್ದಾಗ ಜಗಳವಾಡುತ್ತಿದ್ದ ಇಬ್ಬರು ವಿದ್ಯಾರ್ಥಿಗಳನ್ನು ಕೂರಿಸಿಕೊಂಡು ಕ್ರೀಡಾ ಶಿಕ್ಷಕರು ಮಾತನಾಡುತ್ತಿದ್ದುದನ್ನು ಗಮನಿಸಿದೆ. ಅವರಿಬ್ಬರನ್ನೂ ಒಟ್ಟಿಗೇ ಕೂರಿಸಿಕೊಂಡಿದ್ದ ಶಿಕ್ಷಕ ಕೆಲವು ಪ್ರಶ್ನೆಗಳನ್ನು ಕೇಳುತ್ತಿದ್ದರು. ಅವರ ಪೋಷಕರು ಎಲ್ಲಿ ಕೆಲಸ ಮಾಡುತ್ತಾರೆ, ಮನೆಯಲ್ಲಿ ಏನಾದರೂ ಸಮಸ್ಯೆ ಇತ್ತೇ ಹಾಗು ಅಂತಿಮವಾಗಿ, ಇಬ್ಬರೂ ಜಗಳವಾಡಿದ್ದೇಕೆ ಎಂದು ಪ್ರಶ್ನಿಸುತ್ತಿದ್ದರು. ಇಬ್ಬರೂ ತಮ್ಮತಮ್ಮ ನಿಲುವುಗಳನ್ನು ಹೇಳಿಕೊಂಡರು. ವಾಸ್ತವವನ್ನು ಅರ್ಥ ಮಾಡಿಕೊಂಡ ಶಿಕ್ಷಕರು ವಿವರಗಳನ್ನು ಪರಿಶೀಲಿಸಿ, ಅವರಿಬ್ಬರು ತೆಗೆದುಕೊಳ್ಳಬಹುದಾಗಿದ್ದ ಇತರ ತಾರ್ಕಿಕ ಆಯ್ಕೆಗಳ ಬಗ್ಗೆ ಚರ್ಚಿಸಿದರು. ಅಲ್ಲದೆ ಇಬ್ಬರೂ ಒಂದಾಗುವಂತೆ

ಮಾಡಿದರು. ಇದನ್ನೆಲ್ಲ ಒಂದಷ್ಟು ವಿದ್ಯಾರ್ಥಿಗಳು ಕೇಳಿಸಿಕೊಳ್ಳುತ್ತಿದ್ದುದನ್ನೂ ನಾನು ಗಮನಿಸಿದೆ. ಹೀಗೆ ಗಮನಿಸುವ ಮೂಲಕ ಕಲಿಯುವ (Observational learning) ಪರಿಕಲ್ಪನೆಯ ಮತ್ತು ಸಮಸ್ಯೆ ಬಗೆಹರಿಸುವ ಉಪಾಯವನ್ನು ಅಂತರ್ಗತ–ಗೊಳಿಸಿಕೊಳ್ಳುವ ಸಾಧ್ಯತೆಯ ಮಹತ್ವವನ್ನು ಅರ್ಥ ಮಾಡಿಕೊಳ್ಳಲು ಇದರಿಂದ ನನಗೆ ಸಾಧ್ಯವಾಯಿತು. ವಿಶೇಷವಾಗಿ ಈ ಘಟನೆಯಲ್ಲಿ, ವಯಸ್ಕ ಮಧ್ಯಸ್ಥಿಕೆದಾರರೊಬ್ಬರು ಎರಡೂ ಕಡೆಯ ನಿಲುವುಗಳನ್ನು ಆಲಿಸಿ ನ್ಯಾಯಯುತವಾದ ಮತ್ತು ಪಕ್ಷಪಾತವಿಲ್ಲದ ಪರಿಹಾರವನ್ನು ಮುಂದಿಟ್ಟಿದ್ದರು.

ಈ ಪರಿಕಲ್ಪನೆಗಳ ಕುರಿತು ಇರುವ ನಿಕಟ ಪರಿಚಯದ ಹಿಂದಿನ ಕಾರಣಗಳು

ಸಮಾನತೆಯ ಪರಿಕಲ್ಪನೆಯೊಂದಿಗಿನ ಉನ್ನತ ಮಟ್ಟದ ನಿಕಟ ಪರಿಚಯವು ಅವರ ದೃಷ್ಟಿಕೋನದ ನೆಲೆಯಲ್ಲಿ ಸಮಾನತೆ ಮತ್ತು ಪಕ್ಷಪಾತವನ್ನು ಪರಸ್ಪರ ವಿಭಜಿಸಿ ನೋಡುವ ನೋಟದಿಂದ ಹೊರಹೊಮ್ಮಿದ್ದಾಗಿತ್ತು. ಇದು ಎಷ್ಟೋ ಕಾಲದಿಂದ ಶಾಲೆಯಲ್ಲಿ ರೂಪುಗೊಂಡು ಬೆಳೆದುದಾಗಿತ್ತು. ಶಾಲಾ ವ್ಯವಸ್ಥೆಯು – ಶಿಕ್ಷಕರು, ಪ್ರಕ್ರಿಯೆಗಳು ಮತ್ತು ಪಠ್ಯಕ್ರಮ (ಗೌಪ್ಯ ಪಠ್ಯಕ್ರಮವೂ ಒಳಗೊಂಡು) ಸಮಾನತೆಗೆ ಹೆಚ್ಚಿನ ಮೌಲ್ಯ ನೀಡಿದ್ದವು. ಸಮಾನವಾಗಿರಬೇಕು ಎಂದು ಬಯಸುವುದು ಮತ್ತು ಜನರಲ್ಲಿ ನಿಜವಾದ ಸಮಾನತೆಯನ್ನು ಕಾಣುವುದರ ನಡುವೆ ದೊಡ್ಡ ಮಟ್ಟದ ಸಾಮರಸ್ಯವಿತ್ತು. ಇದಕ್ಕೆ ಕೊಡಬಹುದಾದ ಮತ್ತೊಂದು ನಿದರ್ಶನವೆಂದರೆ, ಈ ಶಾಲೆಯ ಪ್ರಾಂಶುಪಾಲರು ಮತ್ತು ಶಿಕ್ಷಕರ ನಡುವೆ ಕಟ್ಟುನಿಟ್ಟಿನ ಶ್ರೇಣಿಯ ಸಮಸ್ಯೆ ಇರಲಿಲ್ಲ. ಅವರೆಲ್ಲರೂ ಬೆಳಗಿನ ದೈನಂದಿನ ಸಭೆಗೆ ಒಟ್ಟಾಗಿ ಕುಳಿತುಕೊಳ್ಳುತ್ತಿದ್ದರು ಮತ್ತು ಎಲ್ಲಾ ವಿಚಾರಗಳ ಬಗ್ಗೆ ತಮ್ಮ ತಮ್ಮ ಮತ ಚಲಾಯಿಸುತ್ತಿದ್ದರು. ಪ್ರತಿಯೊಬ್ಬರಿಗೂ ಅಭಿಪ್ರಾಯ ವ್ಯಕ್ತಪಡಿಸುವ ಅವಕಾಶವಿತ್ತು. ಗೌಪ್ಯ ಪಠ್ಯಕ್ರಮವು ಕೂಡ ಈ ಪ್ರಕ್ರಿಯೆಗೆ ನೆರವಾಗುವಂತಿತ್ತು. ಇತರ ಎಲ್ಲಾ ಶಾಲೆಗಳಲ್ಲಿ ಬಹುತೇಕ ಪ್ರಕ್ರಿಯೆಗಳಲ್ಲಿ ಇರುವಂತಹ ವಿದ್ಯಾರ್ಥಿ–ಶಿಕ್ಷಕ ಎಂಬ ವರ್ಗೀಕರಣಕ್ಕೆ ಹೊರತಾಗಿ ಈ ಶಾಲೆಯಲ್ಲಿ ಮಾತ್ರ ಹೆಚ್ಚಿನ ಶಿಕ್ಷಕರು ಮತ್ತು ಪ್ರಾಂಶುಪಾಲರು ಕೈಗೆಟಕುವಂತಿದ್ದರು. ಯಾವುದೇ ವಿದ್ಯಾರ್ಥಿಯೂ ಅವರ ಬಳಿ ಹೋಗಿ ತನ್ನ ಸಮಸ್ಯೆಯನ್ನು ಹೇಳಿಕೊಳ್ಳಬಹುದಾಗಿತ್ತು ಅಥವಾ ಪ್ರಶ್ನೆ ಕೇಳಬಹುದಾಗಿತ್ತು. ವಿದ್ಯಾರ್ಥಿಗಳನ್ನು ಅವರು ಅತ್ಯಂತ ಗೌರವದಿಂದ ಕಾಣುತ್ತಿದ್ದರು. ನನಗೆ ಆಶ್ಚರ್ಯವಾಗಿದ್ದೇನೆಂದರೆ, ಕೆಲವೊಂದು ವಿಷಯಗಳಲ್ಲಿ ವಿದ್ಯಾರ್ಥಿಗಳಿಗೂ, ಶಿಕ್ಷಕರಿಗೂ ಸಾಮ್ಯತೆಯನ್ನು ಕಾಣಬಹುದಾಗಿತ್ತು. ಉದಾಹರಣೆಗೆ, ಚಳಿ ಅಧಿಕವಿದ್ದಾಗ ವಿದ್ಯಾರ್ಥಿಗಳಂತೆ ಶಿಕ್ಷಕರಿಗೂ ಹೀಟರ್ ಸೌಲಭ್ಯ ಇರಲಿಲ್ಲ. ವಿದ್ಯಾರ್ಥಿಗಳಿಗಿಲ್ಲದ ಹೀಟರ್ ವ್ಯವಸ್ಥೆಯನ್ನು ಶಿಕ್ಷಕರಿಗೆ ಮಾತ್ರ ಒದಗಿಸುವುದು ಸಮ್ಮತವಾಗಿರಲಿಲ್ಲ. ಅಲ್ಲದೆ, ಎಲ್ಲಾ ವಿದ್ಯಾರ್ಥಿಗಳಿಗೂ ಹೀಟರ್ ಸೌಕರ್ಯ ಒದಗಿಸುವುದು ಸಾಧ್ಯವಾಗದ ಮಾತಾಗಿತ್ತು. ಇದು ಆ ಶಾಲೆಯಲ್ಲಿನ ಸಮಾನತೆಯ ನೀತಿಗೆ ಪ್ರಖರವಾದ ನಿದರ್ಶನವಾಗಿತ್ತು. ಮುಖ್ಯವಾಗಿ ಇದನ್ನು ವಿದ್ಯಾರ್ಥಿಗಳು ತಾವೂ ಅಂತರ್ಗತಗೊಳಿಸಿಕೊಂಡು ಅನುಸರಿಸಲು ಅವಕಾಶವಿತ್ತು.

ಪ್ರಜಾಪ್ರಭುತ್ವವನ್ನು ಬೋಧಿಸುವುದು

ಈಗಾಗಲೇ ಹೇಳಿದಂತೆ ನಾನು ನನ್ನ ಸಂಶೋಧನಾ ವಿಧಾನದ ಭಾಗವಾಗಿ, ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳಿಗೆ ಪ್ರಜಾಪ್ರಭುತ್ವದ ಪರಿಕಲ್ಪನೆಗಳ ಬಗ್ಗೆ ಪಾಠ ಮಾಡಿದ್ದೆ. ಅದಕ್ಕಾಗಿ, ಪ್ರತಿನಿಧಿಗಳನ್ನು ಹೊಂದುವುದು ಮತ್ತು ಅವರ ಕೆಲಸಗಳನ್ನು ಪ್ರಶ್ನಿಸುವುದು, ಸರ್ಕಾರ, ಬದುಕಿನ ಬೇರೆಬೇರೆ ಮಜಲುಗಳಲ್ಲಿ ಸಮಾನತೆ ಮತ್ತು ಕ್ರಿಯಾಶೀಲ ನಾಗರಿಕರಾಗಿರುವುದು ಮೊದಲಾದ ಪ್ರಜಾಪ್ರಭುತ್ವದ ಸಾಮಾನ್ಯ ಚಿಂತನೆಗಳನ್ನು ಒಳಗೊಂಡಿದ್ದ ಕೆಲವು ವಿಷಯಗಳನ್ನು ನಾನು ಆರಿಸಿಕೊಂಡಿದ್ದೆ.


ಆರನೇ ತರಗತಿ: ಪಟ್ವಾರಿ, ನಗರ ಮತ್ತು ಗ್ರಾಮೀಣ ಆಡಳಿತ

ಗ್ರಾಮೀಣ ಪರಿಸರದಲ್ಲಿ ಕಾರ್ಯನಿರ್ವಹಿಸುವ ಗ್ರಾಮೀಣ ಆಡಳಿತದ ಬಗ್ಗೆ ಮತ್ತು ಸರ್ಕಾರದ ಪ್ರತಿನಿಧಿಗಳ (ಪಟ್ವಾರಿ) ಬಗ್ಗೆ ನಾನು ಕಲಿಸಿದಾಗ, ಪ್ರತಿನಿಧಿಗಳನ್ನು ಮಾಧ್ಯಮಗಳು ದಿನಪತ್ರಿಕೆಗಳಲ್ಲಿ ಹೇಗೆ ಹೊಗಳುತ್ತವೆ ಅಥವಾ ತೆಗಳುತ್ತವೆ ಎಂಬುದನ್ನೂ ಮುಂದಿಟ್ಟೆ. ಚುನಾಯಿತ ಪ್ರತಿನಿಧಿಗಳು ನಮ್ಮ ಹಕ್ಕು ಮತ್ತು ಬೇಡಿಕೆಗಳಿಗಾಗಿ ಲೋಕಸಭೆಯಲ್ಲಿ ಹೇಗೆ ಹೋರಾಡುತ್ತಾರೆ ಎಂದೂ ಏಳನೇ ಮತ್ತು ಎಂಟನೇ ತರಗತಿಯಲ್ಲಿ ತಿಳಿಸಿದೆ. ಹೀಗೆ ಈ ವಿಷಯವನ್ನು ವಿದ್ಯಾರ್ಥಿಗಳಿಗೆ ಬೋಧಿಸಿದಾಗ ಅವರು ತಮ್ಮ ಬದುಕಿನಲ್ಲಿ ಕಂಡ ವಾಸ್ತವ ಉದಾಹರಣೆಗಳನ್ನು ಹಂಚಿಕೊಂಡರಲ್ಲದೆ, ಎನ್‌ಸಿಇಆರ್‌ಟಿ ಪಠ್ಯದಲ್ಲಿನ ಅಂಶಗಳು ಉಪಯುಕ್ತ ಎಂಬುದನ್ನು ಕಂಡುಕೊಂಡರು. ಈ ವಿಷಯವನ್ನು ನಗರ ಆಡಳಿತದ ಕುರಿತ ಪಠ್ಯಕ್ಕೂ ವಿಸ್ತರಿಸಲಾಯಿತು. ನಾವು ಅವರ ವಾರ್ಡ್ ಸದಸ್ಯರು ಮತ್ತು ಅಧ್ಯಕ್ಷರ ಬಗ್ಗೆ ಮಾತನಾಡಿದಾಗ, ಮಕ್ಕಳಿಗೆ ಅವರ ಬಗ್ಗೆ ತಿಳಿದಿತ್ತಾದರೂ, ಅವರನ್ನು ಸರ್ಕಾರದ ಭಾಗವಾಗಿ ಕಂಡಿರಲಿಲ್ಲ. ಬದಲಾಗಿ, ಅವರು ಮತ ಯಾಚಿಸುತ್ತಾ, ಚುನಾವಣೆಗಳಲ್ಲಿ ಗೆಲ್ಲುವುದಕ್ಕಾಗಿ ಇರುವ ಜನರು ಎಂದೇ ವಿದ್ಯಾರ್ಥಿಗಳು ಭಾವಿಸಿದ್ದರು. ನಾವು 'ಉತ್ತಮ ನಗರದ ಪರಿಕಲ್ಪನೆಯನ್ನು ವಿದ್ಯಾರ್ಥಿಗಳ ಮುಂದಿಟ್ಟು, ಪ್ರಪಂಚದ ಬೇರೆಬೇರೆ ಉತ್ತಮ ನಗರಗಳನ್ನು ತೋರಿಸಿದಾಗ, ತಮ್ಮ ನಗರ ಯಾಕೆ ಸ್ವಚ್ಛವಾಗಿಲ್ಲ ಮತ್ತು ಸಮರ್ಪಕವಾಗಿ ನಿರ್ವಹಿಸಲ್ಪಡುತ್ತಿಲ್ಲ ಎಂದು ವಿದ್ಯಾರ್ಥಿಗಳು ಪ್ರಶ್ನಿಸಿದರು. ಅಲ್ಲದೆ, ತಮ್ಮ ಜನಪ್ರತಿನಿಧಿಗಳ ಪಾತ್ರದ ಬಗ್ಗೆ ಚರ್ಚಿಸಿದರು. ತಕ್ಷಣವೇ ಅವರು, ಇದರೊಂದಿಗೆ ಸ್ಥಳೀಯ ಸರ್ಕಾರದ ಪಾತ್ರವನ್ನು ಸಂಬಂಧೀಕರಿಸಿ ಜನರಿಗೆ ಉತ್ತರದಾಯಿತ್ವತೆಯಿಂದ ಇರುವ ಹೊಣೆ ತಮ್ಮ ಚುನಾಯಿತ ಪ್ರತಿನಿಧಿಗಳದ್ದು ಎಂದು ತಿಳಿಸಿದರು.

ಆರನೇ ತರಗತಿಯ ವಿದ್ಯಾರ್ಥಿಗಳನ್ನು, ಅವರ ಸುತ್ತಮುತ್ತಲಿನ ಸ್ಥಳಗಳಲ್ಲಿ ಅಷ್ಟೊಂದು ಕಸದ ತ್ಯಾಜ್ಯ ಮತ್ತು ಮಾಲಿನ್ಯ ಯಾಕೆ ಇರುತ್ತದೆ ಎಂದು ಪ್ರಶ್ನಿಸಿದೆವು. ಅದಕ್ಕೆ ಅವರು, 'ಕಸ ತೆಗೆದು ಸ್ವಚ್ಛಗೊಳಿಸಲು ಯಾರೂ ಬರುವುದಿಲ್ಲ' ಎಂದು ಉತ್ತರಿಸಿದರು. ಸ್ಥಳೀಯ ಜನಪ್ರತಿನಿಧಿಗಳನ್ನು ಈ ಬಗ್ಗೆ ಎಂದಾದರೂ ಪ್ರಶ್ನಿಸಿದ್ದೀರಾ ಎಂದು ಕೇಳಿದರೆ, ತಾವು ಪ್ರಶ್ನಿಸಲು ಮುಂದಾದರೂ ತಮ್ಮ ಮನೆಯವರು ಅವಕಾಶ ಕೊಡುವುದಿಲ್ಲ ಎಂದರು. ಅದಕ್ಕೆ ದನಿಗೂಡಿಸಿದ ಒಂದು ಮಗು, 'ಅವರು ಈಗ ಪಕ್ಕದ ಉದ್ಯಾನದಲ್ಲಿ ನಮ್ಮ ಕಸ ಎಸೆಯುತ್ತಾರೆ' ಎಂದು ಹೇಳಿತು. ತಮ್ಮ ಚುನಾಯಿತ ಜನಪ್ರತಿನಿಧಿಗಳನ್ನು ಯಾಕೆ ಪ್ರಶ್ನಿಸುತ್ತಿಲ್ಲ ಎಂಬ ಪ್ರಶ್ನೆಯಿಂದ, ತಾವು ಅವರನ್ನು ಪ್ರಶ್ನಿಸಬಹುದು ಎಂಬ ಅರಿವು ಮಕ್ಕಳಿಗಾಯಿತು. ಸ್ಥಳೀಯ ಜನಪ್ರತಿನಿಧಿಗಳ ಮೂಲಕ ಸರ್ಕಾರವನ್ನು ಪ್ರಶ್ನಿಸಬಹುದು ಎಂಬುದಕ್ಕೆ ಯಾವುದೇ ನೇರ ಉದಾಹರಣೆಯನ್ನು ಆರನೇ ತರಗತಿಯ NCERT ಪಠ್ಯಪುಸ್ತಕ ನೀಡಿರಲಿಲ್ಲ.

ಏಳನೇ ತರಗತಿ: ಮಾಧ್ಯಮ, ಲಿಂಗ ಮತ್ತು ಸಮಾನತೆ

ಪತ್ರಿಕಾ ಸಾಕ್ಷರತೆಯ ಕುರಿತ ತರಗತಿ ಮುಗಿದ ಒಂದು ವಾರದ ಬಳಿಕ, ಏಳನೇ ತರಗತಿಯ ಮಕ್ಕಳಿಗೆ ಐದೈದು ಗುಂಪುಗಳಲ್ಲಿ



ನಗರ ಆಡಳಿತದ ಬಗ್ಗೆ ತಿಳಿದುಕೊಳ್ಳಲು ಕೈಗೊಂಡ ಚಟುವಟಿಕೆಗಳು

ವಾರಕ್ಕೊಂದು ತಮ್ಮದೇ ಆದ ಸ್ವಂತ ಪತ್ರಿಕೆಯನ್ನು ಸಿದ್ಧಪಡಿಸುವಂತೆ ತಿಳಿಸಲಾಯಿತು. ಅಚಿತಹ ರಚನೆಯ ಭಾಗವಾಗಿ (ಕಲಿಕೆಯ ಉನ್ನತ ಹಂತ: ಬ್ಲೂಮ್ಸ್ ಟ್ಯಾಕ್ಸಾನಮಿ – (Higher order of learning: Bloom's Taxonomy) ಒಂದು ಪತ್ರಿಕೆಯಲ್ಲಿ, 'ಒಂಬತ್ತನೇ ತರಗತಿಯಲ್ಲಿ ಕ್ರೀಡಾ ಅವಧಿಯನ್ನು ಸ್ಥಗಿತಗೊಳಿಸಿದ್ದೇಕೆ?' ('ಕಕ್ಷಾ ೯ ಕೇ ಸ್ಪೋರ್ಟ್ಸ್ ಕ್ಯೂಂ ಹುವಾ ಬಂದ್?') ಎಂಬ ಒಂದು ಸುದ್ದಿ ಬರೆದಿದ್ದರು. ಆದರೆ ಒಂಬತ್ತನೇ ತರಗತಿಯ ವಿದ್ಯಾರ್ಥಿಗಳು ಅದಕ್ಕೆ 'ಸುಳ್ಳು ಸುದ್ದಿ', 'ಸತ್ಯಕ್ಕೆ ದೂರವಾದುದು' ಎಂದು ಪ್ರತಿಕ್ರಿಯಿಸಿದರು. ಈ ಬಗ್ಗೆ ತನಿಖೆ ನಡೆಸಿದಾಗ ಒಂಬತ್ತನೇ ತರಗತಿಯ ವಿದ್ಯಾರ್ಥಿಗಳು ಅದು ಸತ್ಯವಾದ ಸುದ್ದಿ ಎಂದು ಒಪ್ಪಿಕೊಂಡರೂ, ಆ ಸುದ್ದಿಯು ತಮ್ಮ ಮೇಲೆ ಆಪಾದನೆ ಹೊರಿಸುವ ಧಾಟಿಯಲ್ಲಿದ್ದ ಕಾರಣ ತಮ್ಮನ್ನು ಕೀಳಾಗಿ ತೋರಿಸುವಂತಿತ್ತು ಎಂದು ವಿವರಿಸಿದರು. ಅಲ್ಲದೆ, ತಾವು ಮತ್ತು ಪ್ರಾಂಶುಪಾಲರು ಚರ್ಚಿಸಿ 'ಸಹಮತ'ದಿಂದ ಆ ನಿರ್ಧಾರ ಕೈಗೊಂಡಿದ್ದೇ ವಿನಾಹ ಯಾರೂ ಹೇರಿದ್ದಲ್ಲ ಎಂದೂ ಸ್ಪಷ್ಟಪಡಿಸಿದರು. ಆ ಪತ್ರಿಕೆಯು ಇಡೀ ಶಾಲೆಗೆ ಹಂಚಿಕೆಯಾಗಿದ್ದ ಕಾರಣ ತಮ್ಮನ್ನು ತಪ್ಪಾಗಿ ಚಿತ್ರಿಸಿದಂತಾಗುತ್ತದೆ ಎಂಬ ಕಾರಣದಿಂದ ಆರಂಭದಲ್ಲಿ ತಾವೆಲ್ಲ ಭಾವೋದ್ವೇಗದಿಂದ ಅಲ್ಲಗಳೆದು ಪ್ರತಿಕ್ರಿಯಿಸಿದ್ದಾಗಿಯೂ ವಿವರಿಸಿದರು. ತಮ್ಮನ್ನು ತಪ್ಪಾಗಿ ಚಿತ್ರಿಸಿದ್ದರ ಅವರು ಧ್ವನಿಯೆತ್ತಿದ್ದರು. ಈ ಘಟನೆಯಿಂದ ವಿದ್ಯಾರ್ಥಿಗಳು ಪತ್ರಿಕೆಗಳು ಸುಳ್ಳು ಮಾಹಿತಿಯನ್ನು ಹರಡ–ಬಹುದಾದ ಸಾಧ್ಯತೆಯನ್ನು ಅರ್ಥ ಮಾಡಿಕೊಂಡರು.

ಈ ಪ್ರತಿಕ್ರಿಯೆಯನ್ನು ನಾವು ಏಳನೇ ತರಗತಿಯಲ್ಲಿ ಹಂಚಿಕೊಂಡಾಗ, ಅಪೂರ್ಣ ಸುದ್ದಿಯನ್ನು ಮುದ್ರಿಸಿದ್ದು ಅರಿವಾಗಿ ಅದನ್ನು ಹಿಂಪಡೆದರು. ಈ ಸಂಬಂಧದ ಚರ್ಚೆಯಲ್ಲೂ ಅವರು, ಸುದ್ದಿಯನ್ನು ಅಂತಿಮಗೊಳಿಸುವ ಮುನ್ನ ಮರುಪರಿಶೀಲಿಸಿರಲಿಲ್ಲ ಎಂದು ಒಪ್ಪಿಕೊಂಡರು. ಯಾವುದೇ ಸುದ್ದಿ ಸಮತೋಲಿತವಾಗಿರ–ಬೇಕಾದರೆ ಅಧ್ಯಯನ ಎಷ್ಟು ಅವಶ್ಯ, ಅದರಿಂದ ಸುದ್ದಿಯ ಎರಡೂ ಮುಖಗಳನ್ನು ವಸ್ತುನಿಷ್ಠವಾಗಿ ಬೆಂಬಲಿಸಲು ಸಾಧ್ಯ ಎಂದು ನಾನು ವಿವರಿಸಿದೆ. ಪ್ರಜಾಪ್ರಭುತ್ವದ ನಾಲ್ಕನೇ ಸ್ತಂಭವಾಗಿರುವ ಮಾಧ್ಯಮವನ್ನು ಶಾಲಾ ಸಂದರ್ಭದಲ್ಲಿ ಸೀಮಿತವಾಗಿ ನಾವು ಚರ್ಚಿಸಿದೆವು ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಅದರ ಪಾತ್ರದ ಬಗ್ಗೆಯೂ ಚರ್ಚೆ ಮುಂದುವರಿಯಿತು.

ಎಂಟನೇ ತರಗತಿ: ಸಂಸತ್ತು–ಸಂವಿಧಾನ, ಅಂಗಗಳು, ಕಾರ್ಯಗಳು

ಎಂಟನೇ ತರಗತಿಯ ವಿದ್ಯಾರ್ಥಿಗಳಿಗೆ ನೀಡಲಾದ ಪಠ್ಯಪುಸ್ತಕದಲ್ಲಿ ಸರ್ಕಾರದ ಬಗ್ಗೆ ಹೇಳಲಾಗಿದ್ದ ಸಂಗತಿಗಳಿಗೂ, ಅವರು ನಿಜಜೀವನದಲ್ಲಿ ಕಾಣುತ್ತಿದ್ದುದಕ್ಕೂ ನಡುವಿನ ಅಂತರವು ಗಣನೀಯವಾಗಿತ್ತು. ಅದಕ್ಕೂ ಮೊದಲು ಅವರು ಟಿ.ವಿ.ಯಲ್ಲಾಗಲಿ, ಬೇರೆ ರೀತಿಯಿಂದಾಗಲಿ ಸಂಸತ್ತನ್ನು ಕಂಡಿರಲಿಲ್ಲ. ಆದ್ದರಿಂದ, ಸರ್ಕಾರ ಎಂದರೆ ಏನು ಮತ್ತು ಏಕೆ ಎಂಬುದನ್ನು ಸಂಬಂಧೀಕರಿಸಲು ಅವರಿಗೆ ಅತ್ಯಂತ ಕಠಿಣ ಸಂಗತಿಯಾಗಿತ್ತು. ಆದರೂ, ಅದನ್ನು ಅರ್ಥೈಸಿಕೊಳ್ಳುವಲ್ಲಿ ಸ್ಥಳೀಯ ಸರ್ಕಾರ ಗಮನಾರ್ಹ ಪಾತ್ರ ವಹಿಸಿತು. ನಾನು ಪಾಠ ಮಾಡಿದ ಮೂರೂ ತರಗತಿಗಳಲ್ಲಿ ಸ್ಥಳೀಯ ಸರ್ಕಾರದ ಮೂಲಕ ಕೇಂದ್ರ ಸರ್ಕಾರದ ಕಡೆ ಸಾಗಿದ್ದು ಬಹಳ ಉಪಯುಕ್ತವೆನಿಸಿತು.

ವಿದ್ಯಾರ್ಥಿಗಳಲ್ಲಿ ಸಮಾನತೆ ಮತ್ತು ಜನಪ್ರತಿನಿಧಿಗಳ ಕುರಿತು ಇದ್ದ ತಿಳಿವಳಿಕೆಯು ಇದೇ ವಿಷಯವನ್ನು ಕುರಿತು ಶೈಕ್ಷಣಿಕ ಪರಿಕಲ್ಪನೆಯನ್ನು ಸಿದ್ಧಪಡಿಸುವಲ್ಲಿ ನನಗೆ ಸಹಕಾರಿಯಾಯಿತು. ಅವರ ಶಾಲೆಯಿಂದಲೇ ಉದಾಹರಣೆಗಳನ್ನು ಎತ್ತಿಕೊಂಡು ಅವುಗಳ ಬಗ್ಗೆ ಗಂಭೀರವಾಗಿ ಪರ್ಯಾಲೋಚಿಸಲು ಅವಕಾಶವಿತ್ತು. ತಮಗೆ ಸಂಬಂಧವಿಲ್ಲದ ಸಂಗತಿಗಳೆಂದು ಅಲಕ್ಷಿಸಿ ಪ್ರತ್ಯೇಕವಾಗಿ ಕಾಣುವ ಬದಲು ತಮ್ಮ ನೈಜ ಬದುಕಿಗೆ ಅನ್ವಯಿಸಿಕೊಳ್ಳಬಹುದಾಗಿತ್ತು. ಇನ್ನು, ವಿಶೇಷವಾಗಿ ಶಾಲಾ ಹಂತದಲ್ಲಿ ಇಂತಹ ಕ್ರಮಗಳು ರೂಢಿಯಲ್ಲಿ ಎಲ್ಲಿ ವಿಫಲವಾಗುತ್ತಿವೆ ಎಂದೂ ಅವರು

ನೋಡಬಹುದಾಗಿತ್ತು. ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಮಟ್ಟದ ರಾಜಕೀಯ ಚೌಕಟ್ಟಿನಲ್ಲಿ ಏನು ನಡೆಯುತ್ತದೆ ಎಂಬ ಅರಿವಿಲ್ಲದಿದ್ದರೂ ತಮಗೆ ಕೈಗೆಟಕುವ ಸಂಗತಿಗಳ ಬಗ್ಗೆ ಅವರಿಗೆ ಸೂಕ್ತ ಜ್ಞಾನವಿತ್ತು. ಅಂದರೆ, ತಮ್ಮ ಸ್ಥಳೀಯ ನಾಯಕರು ಮತ್ತು ಶಾಲಾ ನಾಯಕರು ತಮ್ಮ ಉತ್ತಮ ಜೀವನದ ಅಭ್ಯುದಯಕ್ಕೆ ಹಾಗು ತಾವು ಅವರ ಕಾರ್ಯಶೈಲಿಯನ್ನು ಪ್ರಶ್ನಿಸಬಹುದು ಎಂಬ ಬಗ್ಗೆ ಅರಿವಿತ್ತು. ಅಲ್ಲದೆ, ತರಗತಿ ಪ್ರತಿನಿಧಿಗಳಿಗೆ ತಮ್ಮ ಅಧಿಕಾರ ಬಗ್ಗೆ ವ್ಯಾಪ್ತಿಯ ಅರಿವಿತ್ತು. ಆದರೆ ತಾವು ತಮ್ಮ ಕರ್ತವ್ಯಗಳನ್ನು ಸಮರ್ಪಕವಾಗಿ ನಿಭಾಯಿಸದೇ ಇದ್ದರೆ ಅಧಿಕಾರ ತ್ಯಜಿಸುವಂತೆ ತಾವು ಅವರನ್ನು ಹೇಳಬಹುದು ಎಂಬ ಅರಿವೂ ಅವರಿಗಿತ್ತು.

ತರಗತಿಯಲ್ಲಿ ವಿದ್ಯಾರ್ಥಿಗಳು ಸಮಾನತೆ, ಸ್ವಾತಂತ್ರ್ಯ ಮತ್ತು ನ್ಯಾಯದಂಥ ಪರಿಕಲ್ಪನೆಗಳಿಗೆ ಸಂಬಂಧಿಸಿದಂತೆಯೂ ತಮ್ಮ ಸುತ್ತಮುತ್ತಲಿನಿಂದಲೇ ಉದಾಹರಣೆಗಳನ್ನು ತರುತ್ತಿದ್ದರು. ಹೀಗೆ ಒಂದಕ್ಕೊಂದು ನಂಟು ಬೆಸೆಯುವುದರಿಂದ ಉನ್ನತ ಮಟ್ಟದ ಪರಿಕಲ್ಪನೆಗಳುಳ್ಳ ವಿಷಯಗಳನ್ನು ಇನ್ನೂ ಚೆನ್ನಾಗಿ ಅರ್ಥ ಮಾಡಿಕೊಳ್ಳಲು, ಆ ಉದಾಹರಣೆಗಳನ್ನು ಪಠ್ಯಪುಸ್ತಕದಲ್ಲಿ ನೀಡಲಾದ ಉದಾಹರಣೆಗಳೊಂದಿಗೆ ತುಲನೆ ಮಾಡಲೂ ಸಹಕಾರಿ ಆಯಿತು.

ಗಮನಕೇಂದ್ರಿತ ಗುಂಪು ಚರ್ಚೆ

ಈ ಶಾಲೆಯಲ್ಲಿ ಕೆಲಸ ಮಾಡುವ ವೇಳೆ ನಾನು ಒಂಬತ್ತನೇ ತರಗತಿಯ ವಿದ್ಯಾರ್ಥಿಗಳು ಮೇಲಿನ ವಿಷಯಗಳನ್ನು ಎಷ್ಟರಮಟ್ಟಿಗೆ ಅರ್ಥ ಮಾಡಿಕೊಂಡಿದ್ದಾರೆ ಎಂದು ತಿಳಿದುಕೊಳ್ಳಲು 'ಗಮನಕೇಂದ್ರಿತ ಗುಂಪು ಚರ್ಚೆ' (Focus group discussion) ಕೈಗೊಂಡೆ. ತಲಾ ಹತ್ತು ಮಕ್ಕಳನ್ನು ಒಳಗೊಂಡ ಮೂರು ಗುಂಪುಗಳನ್ನು ರಚಿಸಿದೆ. ವಿಷಯದ ಬಗೆಗಿನ ಅರಿವು ಮತ್ತು ಅಭಿಪ್ರಾಯವನ್ನು ನಿಖರವಾಗಿ ಹೇಳುವ ಮೂಲಕ ತರಗತಿಯಲ್ಲಿ ಬಹಳ ಕ್ರಿಯಾಶೀಲರಾಗಿದ್ದ ಮಕ್ಕಳು ಇದ್ದರು. ಎರಡನೇ ಗುಂಪಿನಲ್ಲಿ, ತರಗತಿಯಲ್ಲಿ ಹೆಚ್ಚು ಕ್ರಿಯಾಶೀಲರೂ ಅಲ್ಲದ ಅಥವಾ ಜಡತೆಯನ್ನೂ ಹೊಂದಿರದ ಮಕ್ಕಳು ಇದ್ದರು. ಮೂರನೇ ಗುಂಪಿನಲ್ಲಿ ತರಗತಿಯಲ್ಲಿ ಇದ್ದರು. ಎಂದೂ ಕ್ರಿಯಾಶೀಲರಾಗಿರದೇ ಇದ್ದ ಮಕ್ಕಳು ಮೂರನೇ ಗುಂಪಿನಲ್ಲಿದ್ದರು. ಪ್ರಜಾಪ್ರಭುತ್ವ ಮತ್ತು ಸರ್ಕಾರದ ಬಗೆಗಿನ ಬಹುತೇಕ ಚಿಂತನೆಗಳನ್ನು ಮೂರೂ ಗುಂಪುಗಳು ಅರ್ಥ ಮಾಡಿಕೊಂಡಿದ್ದವು. ತರಗತಿಯ ಕಾರ್ಯನಿರ್ವಹಣೆಯು ಸರ್ಕಾರ ನಡೆಯುವ ಕ್ರಮದಲ್ಲೇ ಹೇಗೆ ಜರುಗುತ್ತಿದೆ ಎಂಬ ಸ್ಪಷ್ಟ ಸಂಬಂಧವನ್ನು ಕಾಣಬಹುದಾಗಿತ್ತು.

ಇದಕ್ಕೆ ಹೊರತಾಗಿ, ಮೊದಲ ಗುಂಪಿನಲ್ಲಿದ್ದವರಲ್ಲಿ ಬಹುತೇಕ ಸದಸ್ಯರು ಶಾಲೆಯ ಪ್ರತಿನಿಧಿಗಳಾಗಿದ್ದ ಕಾರಣ ಪ್ರಜಾಪ್ರಭುತ್ವದ ಕಾರ್ಯವಿಧಾನದ ಬಗ್ಗೆ ಅವರು ಹೆಚ್ಚು ನಿಖರವಾಗಿ ತಿಳಿದು–ಕೊಂಡಿದ್ದರು. ತಮ್ಮನ್ನು ಪ್ರಶ್ನಿಸಬಹುದು ಎಂಬ ಸಂಗತಿ ಅವರಿಗೆ ಗೊತ್ತಿದ್ದುದರಿಂದ ತಮ್ಮ ನಾಯಕರನ್ನು ಅವರು ಪ್ರಶ್ನಿಸಬಹುದು ಎಂದು ಅರಿತಿದ್ದರು..

ಎರಡನೇ ಗುಂಪು ಸಾಮಾನ್ಯವಾಗಿ ಕಾಣಸಿಗುವ ಮನೋ–ಸ್ಥಿತಿಯನ್ನು ಹೊಂದಿದ್ದಂತೆ ಕಾಣುತ್ತಿತ್ತು. ಮತ ಯಾಚಿಸುವುದು ಎಂದರೆ ಬಲೆಗೆ ಬಿದ್ದಂತೆ ಎಂದೂ, ಸರ್ಕಾರವನ್ನು ಪ್ರಶ್ನಿಸುವುದೆಂದರೆ ಕೊಲೆಗೀಡಾಗುವಂತೆ ಆದೀತು ಅಥವಾ ಆಸೆಗೆ ತಣ್ಣೀರೆರಚಿ–ದಂತಾದೀತು ಎಂದು ತಿಳಿದಿದ್ದರು. ಈ ಗುಂಪು ತನ್ನನ್ನು ತೊಡಗಿಸಿಕೊಳ್ಳುವುದನ್ನು ಅಷ್ಟಾಗಿ ಇಷ್ಟಪಡುತ್ತಿರಲಿಲ್ಲ.

ಮೂರನೇ ಗುಂಪು, ಬಡವರನ್ನು ಪೋಷಿಸುವ ಪೋಷಕರ ಹಾಗೆ ಸರ್ಕಾರ ಎಂಬಂತೆ ಪರಿಭಾವಿಸಿತ್ತು. ಅದು ಭ್ರಷ್ಟಾಚಾರದಲ್ಲಿ ತೊಡಗಿದೆ ಎಂಬ ವಾಸ್ತವಾಂಶ ಅದಕ್ಕೆ ತಿಳಿದಿತ್ತು ಹಾಗು ಭ್ರಷ್ಟಾಚಾರದಲ್ಲಿ ತೊಡಗಿದವರನ್ನು ಪತ್ತೆ ಹಚ್ಚಲೂ ಅದು ಕೆಲಸ ಮಾಡುತ್ತಿತ್ತು. ಎಂದು ಅರಿತಿತ್ತು. ಈ ಪರಿಕಲ್ಪನೆಗಳನ್ನು ಆರು, ಏಳು ಮತ್ತು ಎಂಟನೇ ತರಗತಿಯ ವಿದ್ಯಾರ್ಥಿಗಳು ಸರಿಯಾಗಿ ಅರ್ಥ ಮಾಡಿಕೊಂಡು, ಇವುಗಳ ಹಿಂದಿನ ಆಲೋಚನೆಗಳನ್ನು ಅರಿತಿದ್ದಾರೆಯೇ ಎಂಬುದನ್ನು ಪರೀಕ್ಷಿಸಲು ಕೈಗೊಂಡ ಈ ಪ್ರಯತ್ನದ ಫಲಿತಾಂಶವು ಧನಾತ್ಮಕವಾಗಿತ್ತಲ್ಲದೆ, ವ್ಯಾಪಕವಾಗಿ ಸಹಕಾರಿಯೂ ಆಯಿತು. ಆದರೂ, ಸರ್ಕಾರದ ಮೂರು ಅಂಗಗಳ ಹೆಸರು ಮತ್ತು ಕಾರ್ಯಗಳ ಬಗ್ಗೆ ಎಲ್ಲಾ ಗುಂಪುಗಳು ಮಾಹಿತಿ ನೀಡಲಾಗಲಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ, ಕೆಲವರು ರಾಜಕೀಯವಾಗಿ ತಿಳುವಳಿಕೆಯುಳ್ಳವರಾಗಿದ್ದರೂ, ಅಪವಾದ–ವೆಂಬಂತೆ ಅವರಿಗೆ ತಮ್ಮ ವಾರ್ಡ್ ಸದಸ್ಯರ ಹೆಸರೂ ತಿಳಿದಿರಲಿಲ್ಲ.

ಮುಕ್ತಾಯ

ಮೇಲಿನ ಉದಾಹರಣೆಗಳಲ್ಲಿ ಗಮನಿಸಿದಂತೆ, ಪ್ರಜಾಪ್ರಭುತ್ವ ಎಂಬ ಪರಿಕಲ್ಪನೆಯನ್ನು ಪ್ರಾಯೋಗಿಕವಾಗಿಯೇ ಬದುಕಿ ನೋಡ–



ತರಗತಿಗಳು ಸಿದ್ಧಪಡಿಸಿದ ಪತ್ರಿಕೆಗಳು

ಬೇಕಾಗುತ್ತದೆ. ಮಕ್ಕಳಿಗೆ ತಮ್ಮ ನಿತ್ಯಜೀವನದಲ್ಲಿ ಸಮಾನತೆಯನ್ನು ಅನುಭವಿಸಿ ಅದರ ಸುತ್ತ ತಲೆದೋರುವ ಪ್ರಶ್ನೆ ಮತ್ತು ಅಭಿಪ್ರಾಯಗಳನ್ನು ವ್ಯಕ್ತಪಡಿಸುವಂತಹ ವಾತಾವರಣವನ್ನು ಒದಗಿಸಬಹುದು. ಮಕ್ಕಳು ಮೂರ್ತ ಸಂಗತಿಗಳೊಂದಿಗೆ ಬಹಳ ಬೇಗನೇ ಗುರುತಿಸಿಕೊಳ್ಳುತ್ತಾರೆ. ಪರಿಕಲ್ಪನೆಗಳು ನಿತ್ಯ ಜೀವನದಲ್ಲಿ ಬೆರೆತಾಗ ರೂಢಿಯಲ್ಲಿದ್ದಾಗಲೇ ಇದು ಸಾಧ್ಯವಾಗುವುದು. ಹಾಗೆಯೇ, ಈ ಘಟನೆಯಲ್ಲಿ ಶಾಲಾ ವಾತಾವರಣದಲ್ಲಿ ಪರಿಕಲ್ಪನೆಗಳನ್ನು ರೂಢಿಗತವಾಗಿ ಅರ್ಥೈಸಿಕೊಳ್ಳಲು ನಿರಂತರವಾಗಿ ನೆರವಾಗುವುದರಿಂದ ಪುಸ್ತಕದಲ್ಲಿ ನೀಡಲಾಗಿರುವ ವಿವರಗಳನ್ನು ತಿಳಿದುಕೊಳ್ಳುವುದೂ ಅವರಿಗೆ ಸುಲಭವಾಗಿದೆ ಹಾಗು ಪುಸ್ತಕದಲ್ಲಿನ ಸನ್ನಿವೇಶಗಳನ್ನು ವಾಸ್ತವದ ಸನ್ನಿವೇಶಗಳಿಗೆ ವಿಸ್ತರಿಸುವುದೂ ಅವರಿಗೆ ಸಾಧ್ಯವಾಗಿದೆ. ಅದು, ತಾವೇನು ಕಲಿಯುತ್ತಿದ್ದೇವೆ ಎಂದು ಯೋಚಿಸಿ ಮತ್ತು ಶಾಲೆಯಿಂದಾಚೆಗಿನ ತಮ್ಮ ಜೀವನದಲ್ಲಿ ಅದನ್ನು ಅಳವಡಿಸಿಕೊಳ್ಳಲೂ ಸಾಧ್ಯವಾಗಿದೆ.



ವಿವಿಧ ಸುದ್ದಿಗಳ ಬಗ್ಗೆ ಚರ್ಚೆ



ಅಭಿಲಾಷಾ ಅವಸ್ಥಿ ಅವರು ಪ್ರಸ್ತುತ, ಉತ್ತರಾಖಂಡದ ಪಿಟೋರಾಗಡದಲ್ಲಿರುವ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಕ್ಯಾಂಪಸ್ ಅಸೋಸಿಯೇಟ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಸಮಾಜವಿಜ್ಞಾನ ಮತ್ತು ಮಕ್ಕಳಲ್ಲಿ ಭಾಷಾ ಬೆಳವಣಿಗೆ ಅವರ ಆಸಕ್ತಿಯ ಕ್ಷೇತ್ರವಾಗಿದೆ. ಕ್ರೀಡೆ ಮತ್ತು ಚಿತ್ರಕಲೆಯಲ್ಲಿ ತೊಡಗುವುದು ಅವರಿಗೆ ಇಷ್ಟ.

ಸಂಪರ್ಕಕ್ಕೆ: abhilasha.awasthi18_mae@apu.edu.in ಮೇಲ್ ಮಾಡಬಹುದು.

ಅನುವಾದ: **ರೋಹಿಣಿ ಮುಂಡಾಜೆ** । ಪರಿಶೀಲನೆ: **ಲತಾ ಕೆ.ಸಿ.**